ಮುಖ್ಯಮಂತ್ರಿಯಾಗಲೀ ಅಥವಾ ಸಂಬಂಧಪಟ್ಟ ಮಂತ್ರಿಗಳಾಗಲೀ ಸಂಜೆಯೊಳಗೆ ಉತ್ತರ ಕೊಡಲಿ. ಇಲ್ಲದಿದ್ದರೆ ನಾವು ಹೇಗೆ ಕ್ಷೇತ್ರಕ್ಕೆ ಹೋಗಬೇಕು.

ಅಧ್ಯಕ್ಷರು : ಕ್ಷೇತ್ರಕ್ಕೆ ಹೋಗಬೇಡಿ.

ಶ್ರೀ ಕೆ.ಎಸ್. ಈಶ್ವರಪ್ಪ : ಇಡೀ ರಾಜ್ಯದಲ್ಲಿ ವಿದ್ಯಾರ್ಥಿಗಳಿಗೆ ಈ ಸಮಸ್ಯೆಯಾಗಿದೆ. ಇದನ್ನು ಹೇಗೆ ಪರಿಹಾರ ಮಾಡುವುದು?ಇಡೀ ರಾಜ್ಯದಲ್ಲಿ ವಿದ್ಯಾರ್ಥಿಗಳು ಬೆಂಕಿ ಹಚ್ಚುತ್ತೇವೆ ಎಂದರೆ ಏನು ಮಾಡೋಣ.

ಅಧ್ಯಕ್ಷರು : ಬೆಂಕಿ ಆರಿಸೋಣ.

ಶ್ರೀ ಕೆ. ಎಸ್. ಈಶ್ವರಪ್ಪ: ಪರೀಕ್ಷೆಗೆ ಕಟ್ಟುವುದಕ್ಕೆ 13ನೇ ತಾರೀಖು ಕೊನೆ ದಿನವಾಗಿದೆ. ಪರೀಕ್ಷಾ ಶುಲ್ಕವನ್ನು ಡಬಲ್ಲಾಗಿ ಏರಿಸಿದರೆ ನಾವು ಏನು ಮಾಡುವುದು. ತಾವು ಸರ್ಕಾರದಿಂದ ಉತ್ತರ ಕೊಡಿಸಿ.

ಅಧ್ಯಕ್ಷರು : ಉತ್ತರ ಕೊಡಿ ಎಂದು ಅವರನ್ನು ಕೇಳುತ್ತಿದ್ದೇನೆ.

ಶ್ರಿ ಕೆ.ಎಸ್. ಈಶ್ವರಪ್ಪ : ಸಂಜೆಯೊಳಗೆ ಸಿಗುತ್ತದೆಯೇ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ಎಜುಕೇಷನ್ ಮಿನಿಸ್ಟರ್ ಕೌನ್ಸಿಲ್‌ನಲ್ಲಿದ್ದಾರೆ.

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬ್ಕಾರಿ ಸಚಿವರು): ಮೊನ್ನೆ ಒಂದು ಗಂಟೆಗೆ ದೊಡ್ಡಬಳ್ಳಾಪುರದಲ್ಲಿ ಈ ಘಟನೆಯಾಗಿದೆ. ಅದು ಆದ ಮೇಲೆ ಅರ್ಧಗಂಟೆ ನಂತರ ಪೋಲೀಸ್ ಇಲಾಖೆಯವರು ಹೋಗಿದ್ದಾರೆ. ಆ ಡಕಾಯಿತರು ಹಿಂದೂಪುರ ಮತ್ತು ಆಂಧ್ರದಿಂದ ಬಂದವರು. ಅಲ್ಲಿಗೂ ಕೂಡ ನಮ್ಮ ಜನರನ್ನು ಕಳಿಸಿದ್ದೇವೆ.

ತಮಗೆ ಗೊತ್ತಿರಬಹುದು ಕೋಲಾರದಲ್ಲಿ ಹಿಂದೆ ಆದಂಥ ಪ್ರಕರಣಗಳ ಬಗ್ಗೆ ಹಿಡಿದಿದ್ದೇವೆ. ಇದರ ಬಗ್ಗೆ ಕೂಡಾ 2-3 ದಿವಸಗಳಲ್ಲಿ ಹಿಡಿದು ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ವಾಟಾಳ್ ನಾಗರಾಜ್ ; ಅಧ್ಯಕ್ಷರೇ, ತಮ್ಮ ಗಮನಕ್ಕೆ ತಂದಿದ್ದೇನೆ. ಬೆಂಗಳೂರು ನಗರದಲ್ಲಿ...

ಗಮನ ಸೆಳೆಯುವ ಸೂಚನೆ

ತುಮಕೂರು ಜಿಲ್ಲೆಯ ಅನೇಕ ಗ್ರಾಮಗಳಲ್ಲಿ ಮತ್ತು ಪಟ್ಟಣಗಳಲ್ಲಿ ಕುಡಿಯುವ ನೀರಿನ ತೀವ್ರ ಅಭಾವ ಉಂಟಾಗಿದ್ದು, ಈ ಸಂಬಂಧವಾಗಿ ತಾಲ್ಲೂಕು ಮಟ್ಟದಲ್ಲಿ "ಟಾಸ್ಕ್ ಫೋರ್ಸ್" ಸಮಿತಿ ರಚಿತವಾಗಿದ್ದರೂ ಸಹ ಹಣ ಬಿಡುಗಡೆಯಾಗದೇ ಇರುವುದರಿಂದ ಉಂಟಾಗಿರುವ ಪರಿಸ್ಥಿತಿ.

ಶ್ರೀ ಆರ್. ನಾರಾಯಣ (ಬೆಳ್ಳಾವಿ): ಸನ್ಮಾನ್ಯ ಅಧ್ಯಕ್ಷರೇ, ತುಮಕೂರು ಜಿಲ್ಲೆಯಲ್ಲಿ ಅನೇಕ ಗ್ರಾಮಗಳಲ್ಲಿ ಮತ್ತು ಪಟ್ಟಣಗಳಲ್ಲಿ ಕುಡಿಯುವ ನೀರಿನ ತೀವ್ರ ಅಭಾವ ಉಂಟಾಗಿದ್ದು, ಈ ಸಂಬಂಧವಾಗಿ ತಾಲ್ಲೂಕು ಮಟ್ಟದಲ್ಲಿ 'ಟಾಸ್ಕ್ ಫೋರ್ಸ್' ಸಮಿತಿ ರಚಿತವಾಗಿದ್ದರೂ ಸಹಾ ಹಣ ಬಿಡುಗಡೆಯಾಗದೆ ಇರುವುದರಿಂದ ಉಂಟಾಗಿರುವ ಪರಿಸ್ಥಿತಿ ಬಗ್ಗೆ ಮಾನ್ಯ ಕಂದಾಯ ಮಂತ್ರಿಗಳು ಗಮನ ಸೆಳೆಯಬಯಸುತ್ತೇನೆ.

+ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೇ, ತಮ್ಮ ಅಪ್ಪಣೆ ಪಡೆದು ಈ ಹೇಳಿಕೆಯನ್ನು ನೀಡುತ್ತೇನೆ.

ಪ್ರಸಕ್ತ ಮುಂಗಾರು ಸಾಲಿನ ಜೂನ್ ಮಾಹೆಯಲ್ಲಿ. ತುಮಕೂರು ಜಿಲ್ಲೆಯಲ್ಲಿ ಸರಾಸರಿ 59.9 ಮಿಲಿ ಮೀಟರು ಎದುರಾಗಿ 69.8 ಮಿಲಿ ಮೀಟರು ಮಳೆ ಬಿದ್ದಿರುತ್ತದೆ. ಜಿಲ್ಲೆಯ 10 ತಾಲ್ಲೂಕುಗಳ ಪೈಕಿ ಏಳು ತಾಲ್ಲೂಕುಗಳಲ್ಲಿ ಸಾಮಾನ್ಯಕ್ಕಿಂತ ಹೆಚ್ಚುವರಿ ಮಳೆ ಹಾಗೂ ಉಳಿದ ಮೂರು ತಾಲ್ಲೂಕುಗಳಲ್ಲಿ ಸಾಮಾನ್ಯ ಮಳೆಗಿಂತ ಸ್ವಲ್ಪ ಕಡಿಮೆ ಮಳೆ ಉಂಟಾಗಿರುತ್ತದೆ. ಈ ರೀತಿಯ ಮಳೆಯಿಂದ ಕುಡಿಯುವ ನೀರಿನ ಪರಿಸ್ಥಿತಿಯು ಉತ್ತಮವಾಗುತ್ತದೆ. ಕೃಷಿ ಕಾರ್ಯಕ್ರಮಗಳನ್ನು ಸಹ ರಭಸದಿಂದ ಕೈಗೊಳ್ಳುವ ಅನುಕೂಲವಾಯಿತು. ಕೃಷಿ ಬೆಳೆಗಳ ಪೈಕಿ ಸೂರ್ಯಕಾಂತಿ, ತೊಗರಿ,ಹೈಬ್ರಿಡ್ ಜೋಳ ಮುಂತಾದ ಬೆಳೆಗಳ ಬಿತ್ತನೆ ಕಾರ್ಯ ಶೇಕಡಾ 80 ಭಾಗ ನಡೆಯಿತು. ಎಲ್ಲಾ ತರಹದ ಬೀಜಗಳು, ಗೊಬ್ಬರ ಮತ್ತು ಕೀಟನಾಶಕ ಔಷಧಿಗಳು ಶೇಖರಿಸಿ ಅವುಗಳನ್ನು ಸಕಾಲದಲ್ಲಿ ರೈತರಿಗೆ ದೊರೆಯುವಂತೆ ಏರ್ಪಾಡು ಮಾಡಲಾಗಿತ್ತು. ಕೃಷಿ ಬೆಳೆಗೆ ತಗುಲಿದ್ದ ರೋಗವನ್ನು ಸಹ ಕ್ರಿಮಿನಾಶಕಗಳ ಸಿಂಪರಣೆಯಿಂದ ಹತೋಟಿಗೆ ತರಲಾಯಿತು.

2. ಆದರೆ, ಜುಲೈ ಮತ್ತು ಆಗಸ್ಟ್ ಮಾಹೆಗಳಲ್ಲಿ ಕಡಿಮೆ ಪ್ರಮಾಣದಲ್ಲಿ ಮಳೆ ಉಂಟಾಗಿರುವುದನ್ನು ಹಾಗೂ ಜಿಲ್ಲೆಯ ಕೆಲವು ಭಾಗಗಳಲ್ಲಿ ಕುಡಿಯುವ ನೀರಿನ ತೊಂದರೆ ಇರುವುದನ್ನು ಸಹ ಸರ್ಕಾರವು ಗಮನಿಸಿದೆ. ತ್ವರಿತವಾಗಿ ಅವಶ್ಯವಿರುವ ಎಲ್ಲಾ ಪ್ರದೇಶಗಳಲ್ಲೂ ಕುಡಿಯುವ ನೀರಿನ ಪೂರೈಕೆ ಕ್ರಮವನ್ನು ಕೈಗೊಳ್ಳುವ ಸಲುವಾಗಿ ಜಿಲ್ಲಾಧಿಕಾರಿ, ತುಮಕೂರು, ಇವರಿಗೆ ಒಟ್ಟು ರೂ. 28.50ಲಕ್ಷಗಳನ್ನು ಈಗಾಗಲೇ ಸರ್ಕಾರವು ಬಿಡುಗಡೆ ಮಾಡಿದೆ.ಅಂತಹ ಪ್ರದೇಶಗಳಲ್ಲಿ ಕೊಳವೆ ಬಾವಿಗಳನ್ನು ಕೊರೆಯುವ ಕಾರ್ಯಕ್ರಮ ಭರದಿಂದ ಸಾಗುತ್ತಿದೆ.

3. ಜಿಲ್ಲೆಯಲ್ಲಿ ತೊಂದರೆಗೊಳಗಾದ ಎಲ್ಲಾ ಪ್ರದೇಶಗಳನ್ನು ವ್ಯಾಪಕವಾಗಿ ಪ್ರವಾಸಿಸಿ ಕುಡಿಯುವ ನೀರು, ಮೇವು ಪೂರೈಕೆ ಹಾಗೂ ಉದ್ಯೋಗ ಸೃಜನೆ ಕಾರ್ಯಕ್ರಮಗಳನ್ನು ಅವಶ್ಯವಿರುವ ಎಲ್ಲಾ ಪ್ರದೇಶಗಳಲ್ಲೂ ಕೈಗೊಳ್ಳಬೇಕು. ಮತ್ತು ಅದೇ ರೀತಿ ಸಂಬಂಧಪಟ್ಟ ಎಲ್ಲಾ ಇಲಾಖಾಧಿಕಾರಿಗಳಿಗೂ ಸೂಕ್ತ ನಿರ್ದೇಶನಗಳನ್ನು ನೀಡಬೇಕಾಗಿ ಜಿಲ್ಲಾಧಿಕಾರಿ. ತುಮಕೂರು ಇವರಿಗೆ ಸ್ಪಷ್ಟ ಆದೇಶವನ್ನು ನೀಡಿದೆ.

4. ಕೊಳವೆ ಬಾವಿಗಳನ್ನು ಕೊರೆಯುವ ಕುರಿತು ಟಾಸ್ಕ್ ಫೋರ್ಸ್‌ಸಮಿತಿಯು ನೀಡಿರುವ ಶಿಫಾರಸ್ಸು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

5. ಯೋಜನೆಯಡಿ ಸಾಮಾನ್ಯ ಕುಡಿಯುವ ನೀರು ಪೂರೈಕೆ ಕಾರ್ಯಕ್ರಮಗಳಿರುತ್ತವೆ. ಅಭಾವ ಪರಿಸ್ಥಿತಿಯಿಂದ ಕುಡಿಯುವ ನೀರು ಕೊರತೆ ಕಂಡುಬಂದ ಪ್ರದೇಶಗಳಲ್ಲಿ ಅಗತ್ಯ ಹೆಚ್ಚಿನ ಕಾರ್ಯಕ್ರಮಗಳನ್ನು ಕೈಗೊಳ್ಳುವ ಸಲುವಾಗಿ, ಯೋಜನೆ ಅಡಿ ಲಭ್ಯವಿರುವ ಹಣದ ಜೊತೆಗೆ ಸಿ.ಆರ್.ಎಪ್. ಅಡಿ ಹಣ ಬಿಡುಗಡೆ ಮಾಡಲು ಮಾತ್ರ ಅವಕಾಶವಿರುತ್ತದೆ. ಅಗತ್ಯತೆ ಕುರಿತು ಜಿಲ್ಲಾಧಿಕಾರಿಯವರಿಂದ ಬರುವ ವರದಿಗಳನ್ನು ಪರಿಶೀಲಿಸಿ ಸಿ.ಆರ್.ಎಫ್.ಅಡಿಯಲ್ಲಿಯೂ ಸಹ ಸೂಕ್ತ ಹಣ ಬಿಡುಗಡೆ ಮಾಡಿ ಕುಡಿಯುವ ನೀರಿನ ಕೊರತೆಯನ್ನು ನೀಗಿಸಲಾಗುವುದು.

+ಶ್ರೀ ಆರ್. ನಾರಾಯಣ: ಸನ್ಮಾನ್ಯ ಅಧ್ಯಕ್ಷರೆ, ಮಂತ್ರಿಗಳ ಉತ್ತರವನ್ನು ಕೇಳಿ. ನನಗೆ ಬಹಳ ದುಃಖವಾಗುತ್ತಿದೆ. ಟಾಸ್ಕ್‌ಫೋರ್ಸ್‌ನ್ನು ಕುಡಿಯುವ ನೀರನ್ನು ಒದಗಿಸುವುದಕ್ಕೋಸ್ಕರ ಒಂದು ನಿರ್ದಿಷ್ಟವಾದ ಉದ್ದೇಶಕ್ಕೋಸ್ಕರ ರಚನೆ ಮಾಡಿದ್ದಾರೆ. ಇದು ರಚನೆಯಾಗಿ ಐದೂವರೆ ತಿಂಗಳಾಗಿದೆ. ಈಗ ಮಾನ್ಯ ಮಂತ್ರಿಗಳು ಉತ್ತರದಲ್ಲಿ ಈ ಯೋಜನೆಯಡಿಯಲ್ಲಿ ಲಭ್ಯವಿರುವ ಹಣವನ್ನು ಒದಗಿಸುತ್ತೇವೆಂದು ಹೇಳಿದ್ದಾರೆ. ಕುಡಿಯುವ ನೀರಿನ ವ್ಯವಸ್ಥೆಗೆ ಹಣವನ್ನು ಜಿಲ್ಲಾಪರಿಷತ್ತು ಮತ್ತು ಸ್ಕೇರ್‌ಸಿಟಿಯಲ್ಲಿ

ಸರ್ಕಾರ ಕೊಡಬೇಕು. ಇತ್ತೀಚೆಗೆ ಟಾಸ್ಕ್ ಫೋರ್ಸ್‌ನಿಂದ ಕೊಡಬೇಕೆಂದಿದೆ. ಜಿಲ್ಲಾ ಪರಿಷತ್ತಿನಲ್ಲಿ ವಿಚಾರಿಸಿದ್ದೇನೆ. ನಮ್ಮಲ್ಲಿ ಮೈನ್ ಬಜೆಟ್ ಇನ್ನೂ ಆಗಿಲ್ಲ ಆ ಮೈನ್ ಬಜಟ್‌ನ ಅಲೋಕೇಷನ್‌ನ್ನು ನೋಡಿಕೊಂಡು ಆಕ್ಷನ್ ಪ್ಲಾನ್ ಮಾಡುತ್ತಾರೆ. ಆ ಆಕ್ಷನ್ ಪ್ಲಾನ್ ಅಪ್ರೂ ಆಗಬೇಕಾದರೆ ನಮ್ಮ ರಾಜ್ಯದ ಬಜಟ್ ಅಪ್ರೂ ಆಗಬೇಕಾಗುತ್ತದೆ. ಅಲ್ಲಿಯವರೆಗೂ ಈಗ ಒಂದು ಬೋರ್‌ವೆಲ್ ಕೊರೆಯಲೂ ಸಹ ಹಣವಿಲ್ಲ ಮತ್ತು ಅವರ ಪ್ಲಾನ್ ಅಪ್ರೂ ಆಗಿಲ್ಲ. ಕಳೆದ ಐದುವರೆ ತಿಂಗಳಿನಿಂದ ಟಾಸ್ಕ್ ಫೋರ್ಸ್ ಒಂದೂ ಬೋರ್‌ವೆಲ್‌ಗೆ ಕೊಟ್ಟಿಲ್ಲ ನಾನು ಬಹಳ ವಿಷಾದದಿಂದ ಹೇಳಬೇಕಾಗುತ್ತದೆ. ನಾನಂತು ಕಳೆದ ಒಂದು ತಿಂಗಳಿನಿಂದ ನನ್ನ ಕ್ಷೇತ್ರಕ್ಕೆ ಹೋಗಲಿಕ್ಕೆ ಆಗಲಿಲ್ಲ. ನಾನು ಜಿಲ್ಲಾಧಿಕಾರಿಗಳಲ್ಲಿ ಮನವಿ ಕೊಟ್ಟಿದ್ದೇನೆ, ಜಿಲ್ಲಾ ಪರಿಷತ್ತಿಗೆ ಕೊಟ್ಟಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳಿಗೆ ವೈಯಕ್ತಿಕವಾಗಿ ಹೇಳಿದ್ದೇನೆ. ಮಾನ್ಯ ಕಂದಾಯ ಮಂತ್ರಿಗಳಿಗೆ ಹೇಳಿದ್ದೇನೆ. ನಿಮಗೆ ಹೇಳಬೇಕೆಂದರೆ ಪ್ರತಿ ತಾಲ್ಲೂಕು ಮಟ್ಟದಲ್ಲೂ ನಾವು ಟಾಸ್ಕ್ ಫೋರ್ಸ್‌ನಲ್ಲಿ ಮೀಟಿಂಗ್‌ನ್ನು ಮಾಡಿದ್ದೇವೆ. ಕನಿಷ್ಟಪಕ್ಷ ಪ್ರತಿಯೊಂದು ತಾಲ್ಲೂಕಿನಲ್ಲೂ 100 ಬೋರ್‌ವೆಲ್‌ಗಳ ಅವಶ್ಯಕತೆ ಇದೆ ಎಂದು ಗುರುತಿಸಿ,ಸಂಬಂಧ ಪಟ್ಟ ಎಲ್ಲಾ ಅಧಿಕಾರಿಗಳು ಗುರುತಿಸಿ, ಶಾಸಕರು ಗುರುತಿಸಿ ಜಿಲ್ಲಾಧಿಕಾರಿಗಳಿಗೆ ಕಳುಹಿಸಿ ಕೊಟ್ಟಿದ್ದೇವೆ. ಅಲ್ಲಿಂದ ಅದು ಸರ್ಕಾರಕ್ಕೂ ಬಂದಿದೆ. ಅದು ಕೇವಲ ಒಂದು ವರದಿಯ ರೂಪದಲ್ಲಿ ಹೋಗಿದೆ. ಈ ಸಮಸ್ಯೆ ಬಹಳ ಗಂಭೀರವಾದ ಸಮಸ್ಯೆಯಾಗಿದೆ. ಇವತ್ತು ಕುಡಿಯುವ ನೀರಿನ ಸಮಸ್ಯೆ ಜೀವನ್ಮರಣದ ಪ್ರಶ್ನೆಯಾಗಿದೆ ಯಾವ ರೀತಿ ಸರ್ಕಾರದ ಮೇಲೆ ಒತ್ತಾಯ ತರಬೇಕು, ಸರ್ಕಾರದ ಮನಸ್ಸನ್ನು ಯಾವ ರೀತಿ ಒಲಿಸಿಕೊಳ್ಳಬೇಕೆಂಬುದು ನನಗೆ ಅರ್ಥವಾಗುತ್ತಿಲ್ಲ. ಮೂರು ದಿನಗಳಿಂದಲೂ ಈ ಸಬೆಯಲ್ಲಿ ನಾನು ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ಸರ್ಕಾರಕ್ಕೆ ತತ್‌ಕಾಲಕ್ಕೆ ಎಷ್ಟು ಹಣ ಬಿಡುಗಡೆಮಾಡಲು ಸಾಧ್ಯವಿದೆ.

ಎನ್ನತಕ್ಕದನ್ನು ತಿಳಿಸಬೇಕಾಗುತ್ತದೆ, ಇಲ್ಲದಿದ್ದರೆ ನಾನು ಅನಿವಾರ್ಯವಾಗಿ ಧರಣಿ ಮಾಡಬೇಕಾದ ವಿಷಯವನ್ನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಮುಖ್ಯಮಂತ್ರಿಗಳು ಇಲ್ಲೇ ಇದ್ದಾರೆ. ಖಚಿತವಾಗಿ ಎಷ್ಟು ಬೋರ್‌ವೆಲ್‌ಗಳ ಅವಶ್ಯಕತೆ ಇದೆ, ಎಷ್ಟು ಹಣವನ್ನು ಬಿಡುಗಡೆ ಮಾಡುತ್ತೀರಾ ಎನ್ನುವುದನ್ನು ಹೇಳಬೇಕೆಹೊರತು, ಈ ಒಂದು ರಿಪೋರ್ಟನ್ನು ಕೇಳಲಿಕ್ಕೆ ನಾನು ತಯಾರಿಲ್ಲವೆಂಬ ಮಾತನ್ನು ಹೇಳುತ್ತೇನೆ.

+ಶ್ರೀ ಷಫಿ ಅಹಮ್ಮದ್ ; ಸನ್ಮಾನ್ಯ ಅಧ್ಯಕ್ಷರೇ, ಈಗತಾನೆ ಸನ್ಮಾನ್ಯ ಕಂದಾಯ ಸಚಿವರು, 28 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆಂದು ಹೇಳಿದ್ದಾರೆ. ಆದರೆ ಬಿಡುಗಡೆ ಮಾಡಿರುವ ಈ 28 ಲಕ್ಷ ರೂಪಾಯಿಗಳ ಹಣವನ್ನು ಕಳೆದ ಸಾರಿ ಅಭಾವ ಪರಿಸ್ಥಿತಿ ಇದ್ದಾಗ ಪೂರ್ತಾ ಖರ್ಚು ಮಾಡಿದ್ದಾರೆ. ಈವತ್ತು ಜಿಲ್ಲಾಧಿಕಾರಿಗಳು ಯಾವುದೇ ಕೆಲಸವನ್ನು ತೆಗೆದುಕೊಳ್ಳಬೇಕಾದರೂ ಅಲ್ಲಿ ಒಂದು ರೂಪಾಯಿ ಕೂಡ ಇಲ್ಲ. ಈವತ್ತು ಗ್ರಾಮಾಂತರ ಪ್ರದೇಶದಲ್ಲಿ ಸರ್ಕಾರದ ವತಿಯಿಂದ ಟಾಸ್ಕ್ ಫೋರ್ಸ್ ಎಂದು ಏನು ತಾಲ್ಲೂಕು ಸಮಿತಿಯನ್ನು ಮಾಡಿದ್ದಾರೆ. ಅದರಲ್ಲಿ ನಾವೂ ಸಹ ಯಾವ ರೀತಿ ಕ್ರಮ ತೆಗೆದುಕೊಳ್ಳಬೇಕು, ಒಂದು ಮಂಡಲದಲ್ಲಿ ಕನಿಷ್ಟಪಕ್ಷ 10 ಬೋರ್‌ವೆಲ್‌ಗಳನ್ನು ಅತಿಶೀಘ್ರವಾಗಿ ತೆಗೆದುಕೊಳ್ಳಲು ಸಾಧ್ಯವಾಗುತ್ತದೆಂದು ಚರ್ಚೆ ಮಾಡಿ ಜಿಲ್ಲಾಧಿಕಾರಿಗಳಿಗೆ ಕೊಟ್ಟಿದ್ದೇವೆ. ಕಳೆದ ಸಾರಿ ಇದಕ್ಕಾಗಿ ಏನು ಹಣವನ್ನು ಬಿಡುಗಡೆ ಮಾಡಿದ್ದಾರೆ ಅದರಲ್ಲಿ ನಾವು ರೂರಲ್ ಪಾರ್ಟ್ಸ್‌ನಲ್ಲಿ ಬೋರ್‌ವೆಲ್ಸ್‌ನ್ನು ಸಹ ತೆಗೆದುಕೊಂಡಿದ್ದೇವೆ. ಈವತ್ತು ತುಮಕೂರು ನಗರದಲ್ಲಿ 2 ಲಕ್ಷಕ್ಕೂ ಹೆಚ್ಚು ಜನಸಂಖ್ಯೆ ಇದೆ. ಅಲ್ಲಿ ಕುಡಿಯುವ ನೀರಿಗಾಗಿ ಬಹಳ ಅಭಾವವಿದೆ. ಅಲ್ಲಿ ಮೈದಾಳಕೆರೆಯಿಂದ ಏನು ನೀರು ಬರುತ್ತಿತ್ತೋ ಆ ಕೆರೆ ಸಹ ಈವತ್ತು

ಬತ್ತಿಹೋಗಿದೆ. ಹೀಗಾಗಿ ಕುಡಿಯುವ ನೀರಿಗೆ ಬಹಳ ಸಮಸ್ಯೆಯಾಗಿದೆ. ಸರ್ಕಾರದಿಂದ ಏನು ಹಣಕೊಟ್ಟರೂ ನಾವು ಗ್ರಾಮಾಂತರ ಪ್ರದೇಶಗಳಲ್ಲಿ ಖರ್ಚು ಮಾಡುತ್ತಿದ್ದೇವೆ. ಆದರೆ ನಗರ ಪ್ರದೇಶಗಳಿಗೆ ಯಾವ ವಿಧವಾದ ಹಣವನ್ನು ಟಾಸ್ಕ್ ಫೋರ್ಸ್‌ನಿಂದ ಬಿಡುಗಡೆ ಮಾಡುತ್ತಿಲ್ಲ. ಆದುದರಿಂದ ಸರ್ಕಾರದವರು ಗ್ರಾಮಾಂತರ ಪ್ರದೇಶಕ್ಕೆ ಎಷ್ಟು ಹಣವನ್ನು ಬಿಡುಗಡೆ ಮಾಡುತ್ತೀರಿ ಮತ್ತು ನಗರ ಪ್ರದೇಶಕ್ಕೆ ಎಷ್ಟು ಹಣವನ್ನು ಬಿಡುಗಡೆ ಮಾಡುತ್ತೀರಿ ಎಂಬ ಬಗ್ಗೆ ನೇರವಾದ ಡೈರೆಕ್ಷನ್ ಕೊಟ್ಟರೆ ಸೂಕ್ತ.

ಈವತ್ತು ಏನಾಗಿದೆ ಎಂದರೆ, ತುಮಕೂರು ನಗರದಲ್ಲ 2 ಲಕ್ಷದಷ್ಟು ಜನಸಂಖ್ಯೆ ಇದೆ. ಮುಖ್ಯವಾಗಿ ಎಲ್ಲರೂ ಬೋರ್‌ವೆಲ್ಸ್ ಮೇಲೆ ಅವಲಂಬಿಸಿದ್ದಾರೆ. ಆದುದರಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಎಷ್ಟು ಬೋರ್‌ವೆಲ್‌ಗಳನ್ನು ತೆಗೆದುಕೊಳ್ಳುತ್ತೀರಿ ಮತ್ತು ನಗರ ಪ್ರದೇಶದಲ್ಲಿ ಎಷ್ಟು ಬೋರ್‌ವೆಲ್‌ಗಳನ್ನು ತೆಗೆದುಕೊಳ್ಳುತ್ತೀರಿ ಎಂಬ ಬಗ್ಗೆ ನೇರವಾಗಿ ಒಂದು ಡೈರೆಕ್ಷನ್ ಕೊಟ್ಟರೆ ಸೂಕ್ತ. ತುಮಕೂರು ಜಿಲ್ಲೆಯಲ್ಲಿ ಕುಡಿಯುವ ನೀರು ಇಲ್ಲ. ಆದುದರಿಂದ ದಯಮಾಡಿ ಇದಕ್ಕೆ ಎಷ್ಟು ಹಣವನ್ನು ಬಿಡುಗಡೆ ಮಾಡುತ್ತೀರಿ ಎನ್ನುವುದನ್ನು ಹೇಳಬೇಕೆಂದು ಮಾನ್ಯ ಸಚಿವರನ್ನು ಕೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಸನ್ಮಾನ್ಯ ಅಧ್ಯಕ್ಷರೇ, ಈ ಐದು ತಿಂಗಳಲ್ಲಿ ಏನು ಹಣವನ್ನು ಬಿಡುಗಡೆ ಮಾಡಿಲ್ಲವೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ ಅದನ್ನು ನಾನು ಒಪ್ಪುವುದಿಲ್ಲ. ಏಕೆಂದರೆ, ಬಿಡುಗಡೆಯಾಗಿದ್ದಂತೂ ನನ್ನ ಕಡೆ ವಾಪಸ್ಸು ಬರುವುದಿಲ್ಲ.

ಶ್ರೀ ಆರ್. ನಾರಾಯಣ: ಬೋರ್‌ವೆಲ್‌ಗಾಗಿ ಎಷ್ಟು ದುಡ್ಡು ಬಿಡುಗಡೆ ಮಾಡಿದಿರಿ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಈಗ ನನ್ನ ಹತ್ತಿರ ಇರತಕ್ಕಂಥ ಅಂಕಿ ಸಂಖ್ಯೆಗಳ ಪ್ರಕಾರ ಡೆಪ್ಯೂಟಿ ಕಮೀಷನರ್‌ನವರಿಂದ ಬಂದಂಥ ವರದಿ ಪ್ರಕಾರ, ಮತ್ತು ಗೌರ್ಮೆಂಟ್ ಆರ್ಡರ್ ಪ್ರಕಾರ ಅವರಿಗೆ ಬಿಡುಗಡೆ ಆದ ಹಣ ಎಷ್ಟೆಂದರೆ, ನ್ಯಾಚುರಲ್ ಕಲಾಮಿಟಿ ಫಂಡ್‌ನಿಂದ 28, 50,000ರೂಪಾಯಿ. ತಿಂಗಳವಾರು, ವಿವರಬೇಕಾದರೂ ಕೂಡ ಇದೆ ಇದು ನಾಲ್ಕು ತಿಂಗಳಲ್ಲಿ ಬಿಡುಗಡೆ ಆಗಿದೆ. ನಂತರ ಸೆಂಟ್ರಲ್ ಸೆಕ್ಟಾರ್‌ನಲ್ಲಿ 28,48,000 ರೂಪಾಯಿ ಮೇ 1991 ರಲ್ಲಿ ಬಿಡುಗಡೆ ಆಗಿದೆ. ಆಮೇಲೆ ಸ್ಟೇಟ್ ಸೆಕ್ಟಾರ್‌ನಲ್ಲಿ 41,45,000 ರೂಪಾಯಿಗಳು ಮೇ ತಿಂಗಳಲ್ಲಿ ಬಿಡುಗಡೆಯಾಗಿದೆ. ಇದು ಅಲ್ಲದೆ, ನ್ಯಾಚುರಲ್ ಕಲಾಮಿಟಿ ಫಂಡ್‌ನಲ್ಲಿ ಇಪ್ಪತ್ತೆಂಟು ಲಕ್ಷ ರೂಪಾಯಿ ಬಿಡುಗಡೆಯಾಗಿದೆ. ಎಂದು ಹೇಳಿದ್ದೇನೆ. ಒಟ್ಟಿಗೆ 98,43,000 ರೂಪಾಯಿಗಳನ್ನು ಈ ಐದು ತಿಂಗಳಲ್ಲಿ ವಿವಿಧ ಸ್ಕೀಮ್‌ನಲ್ಲಿ ಬಿಡುಗಡೆ ಮಾಡಿದ್ದೇವೆ. ಅಲ್ಲದೆ ನಮ್ಮ ನ್ಯಾಚುರಲ್ ಕಲಾಮಿಟಿ ಫಂಡ್‌ನಿಂದ 28 ಲಕ್ಷ ರೂಪಾಯಿಗಳು ಬಿಡುಗಡೆ ಮಾಡಿದ್ದೇವೆಂದು ಹೇಳಿದ್ದೇನೆ. ಅದರೊಳಗೆ 22,50,000 ರೂಪಾಯಿ(ಮಾನ್ಯ ಸದಸ್ಯರಾದ ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ ರವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು) ಹಳ್ಳಿಗಳಿಗೆ ಬಿಡುಗಡೆ ಮಾಡಿದ್ದೇವೆ, ಆರು ಲಕ್ಷರೂಪಾಯಿಗಳನ್ನು ಕುಡಿಯುವ ನೀರಿಗಾಗಿ, ಪಟ್ಟಣಗಳಿಗೆ ಬಿಡುಗಡೆ ಮಾಡಿದ್ದೇವೆ. ಹೀಗೆ ಸುಮಾರು ಒಂದು ಕೋಟಿ ರೂಪಾಯಿ ಸಮೀಪ ಅವರ ಹತ್ತಿರ ಹಣ ಇದೆ. ಅದರಲ್ಲಿ ಎಷ್ಟು ಖರ್ಚಾಗಿದೆಯೆಂದು ಸಂಪೂರ್ಣವಾದ ಮಾಹಿತಿ ಡೆಪ್ಯೂಟಿ ಕಮೀಷನರರಿಂದ ಇದುವವರೆಗೂ ಬಂದಿಲ್ಲ. ಆದರೆ ಈಗ 1990-91 ಮತ್ತು 1991-92ನೇ ಸಾಲಿನಲ್ಲಿ ಕೊರೆದ ಬಾವಿಗಳಿಷ್ಟು ಎಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ತುಮಕೂರಿನಲ್ಲಿ 52, ಗುಬ್ಬಿ 46, ಕುಣಿಗಲ್ 50; ತಿಪಟೂರು 78, ತುರುವಕೇರೆ 57,

ಚಿಕ್ಕನಾಯಕನಹಳ್ಳಿ 65,ಮಧುಗಿರಿ 45, ಕೊರಟಗೆರೆ 48, ಸಿರಾ 49, ಮತ್ತು ಪಾವಗಡದಲ್ಲಿ 39. ಒಟ್ಟು 1990-91 ಮತ್ತು 1991-92ರ ಸಾಲಿನ ಆಗಸ್ಟ್‌ವರೆಗೆ 529 ಬಾವಿಗಳನ್ನು ಕೊರೆಯಲಾಗಿದೆ.

ಶ್ರೀ ಆರ್. ನಾರಾಯಣ್ : ಈಗ ತಕ್ಷಣ ನಮ್ಮ ಪರಿಹಾರಕ್ಕೆ ಏನಾದರೂ ಮಾಡಿ..

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದಕ್ಕೆ ಆಗಸ್ಟ್‌ವರೆಗೆ ಎಂದು ಹೇಳುತ್ತಿದ್ದೇನೆ. ಈಗ ನನಗೆ ವರದಿ ಬಂದಿದೆ. ಈಗಾಗಲೇ ತಮಗೆ ಹೇಳಿದ ಹಾಗೆ ಕೆಲವು ಕಡೆ ತೊಂದರೆಯಿದೆ. ಅದನ್ನು ನನ್ನ ಗಮನಕ್ಕೆ ತಂದಿದ್ದಾರೆ. ಅದಕ್ಕೋಸ್ಕರ task force ನವರು ಕೂಡ ಹೆಚ್ಚಿನ ಹಣಬೇಕೆಂದು ಕೇಳಿದ್ದಾರೆ. ಎಲ್ಲಾ ಸೇರಿ ಸುಮಾರು ಮೂರು ಕೋಟಿ ರೂಪಾಯಿಗಳನ್ನು ಕೇಳಿದ್ದಾರೆ. ಅದಕ್ಕೆ ಒಂದು ಕೋಟಿ ಹಣವಂತೂ ಅವರ ಹತ್ತಿರ ಇದೆ. ಯಾವ ಯಾವ ಬಾಬ್ತಿಗೆ ಅದನ್ನು ಖರ್ಚು ಮಾಡಬೇಕೋ ಆಯಾ ಬಾಬ್ತಿಗೆ ಖರ್ಚು ಮಾಡಲೇ ಬೇಕು. ಅಂಥದ್ದಕ್ಕೆ ಖರ್ಚು ಮಾಡಿ ಉಳಿದಂಥ ಹಣವನ್ನು ಎಲ್ಲಲ್ಲಿ ಅವಶ್ಯಕತೆ ಇದೆ, ಇಲ್ಲಿಗೆ ಖರ್ಚು ಮಾಡುತ್ತೇವೆ. ಈಗಾಗಲೇ ಮಾನ್ಯ ಶಫಿ ಅಹಮದ್ ರವರು ಹೇಳಿದ ಹಾಗೆ, ಒಂದೊಂದು ತಾಲ್ಲೂಕಿನಲ್ಲಿ 10 ಹಳ್ಳಿಗಳು ಇರಬಹುದು 15 ಹಳ್ಳಿಗಳು ಕೂಡ ಬರಬಹುದು, ಅಂಥ ನೆಸೆಸಿಟಿ ಇರುವ ಕಡೆ As and when they demand we will release the funds.

ಶ್ರೀ ಆರ್. ನಾರಾಯಣ : ಮಾನ್ಯ ಅಧ್ಯಕ್ಷರೆ, ಇಂತಹ ಕಡೆ ಅವಶ್ಯಕತೆ ಇದೆ. ಬೋರ್‌ವೆಲ್ ತೆಗೆಸಲು ತಕ್ಷಣ ಕ್ರಮ ತೆಗೆದುಕೊಳ್ಳಬೇಕೆಂದು ಈಗಾಗಲೇ ವರದಿ ಬಂದಿದೆ. ನಾವು ಶಾಸಕರು ಒತ್ತಾಯ ಮಾಡಿದ್ದೇವೆ. ಇದರ ಬಗ್ಗೆ ನಿಮ್ಮ ಕಾರ್ಯಕ್ರಮ ಏನು? ಈಗ ತಕ್ಷಣಕ್ಕೆ ಎಷ್ಟು ಹಣ ಬಿಡುಗಡೆ ಮಾಡಲಿಕ್ಕೆ ಸಾಧ್ಯ. ಹಣ ಬಿಡುಗಡೆ ಮಾಡುವ ಬಗ್ಗೆ ಖಚಿತವಾಗಿ ಹೇಳಬೇಕೆಂದು ನಾನು ಕೇಳುತ್ತಿದ್ದೇನೆ. ಬರೀ ಹಾರಿಕೆ ಉತ್ತರ ಕೊಟ್ಟರೆ ಆಗುವುದಿಲ್ಲ. ಖಚಿತವಾಗಿ ಇಷ್ಟು ಹಣವನ್ನು ಬಿಡುಗಡೆ ಮಾಡುತ್ತೇವೆಂದು ಹೇಳಬೇಕು. ಇವೊತ್ತು ಬೋರ್‌ವೆಲ್‌ಗಳ ಅವಶ್ಯಕತೆ ಇದೆ, ನಾವುಗಳು ನಮ್ಮ ಕ್ಷೇತ್ರಕ್ಕೆ ಹೋಗಲಿಕ್ಕೇ ಆಗುವುದಿಲ್ಲ. ಯಾವ ರೀತಿ ನಾವು ನಮ್ಮ ಕ್ಷೇತ್ರಗಳಿಗೆ ಹೋಗಿ ಕೆಲಸ ಮಾಡಬೇಕು ಎನ್ನುವುದನ್ನಾದರೂ ಹೇಳಿ. ಜಿಲ್ಲಾಪರಿಷತ್‌ನಲ್ಲಿ ಬೋರ್‌ವೆಲ್ ಕೊರೆಯಲಿಕ್ಕೆ ದುಡ್ಡು ಇಲ್ಲ. ಟಾಸ್ಕ್ ಫೋರ್ಸ್‌ಗೆ ಸರ್ಕಾರದವರು ಹಣವನ್ನು ಬಿಡುಗಡೆ ಮಾಡಿಲ್ಲ. ಹೀಗಾದರೆ ನಾವು ಹೋಗಿ ಕೆಲಸಮಾಡುವುದಾದರೂ ಹೇಗೆ, ಜನಗಳಿಗೆ ಕುಡಿಯುವ ನೀರಿನ ಬಗ್ಗೆ ಹೇಗೆ ಉತ್ತರ ಹೇಳಬೇಕು ಎನ್ನುವುದನ್ನು ಹೇಳಿ. ತಾವು ಹೇಳುವಂಥ ಬರೀ ಹೇಳಿಕೆಯಿಂದ ನಾವು ತೃಪ್ತಿಯಾಗಲಿಕ್ಕೆ ಸಾಧ್ಯವಿಲ್ಲ. ತಾವು ಖಚಿತವಾಗಿ ಹೇಳಬೇಕಾಗುತ್ತದೆ. ಈಗ ನಾವು ಇದರ ಬಗ್ಗೆ ಉತ್ಪ್ರೇಕ್ಷೆ ಮಾಡಿ ಹೇಳುತ್ತಿಲ್ಲ. ನಾವು ಪ್ರತಿ ಮಂಡಲ್‌ಗೆ ಐದು ಬೋರ್‌ವೆಲ್‌ಗಳನ್ನು ಕೊರೆಸಲೇ ಬೇಕಾಗುತ್ತದೆ. ತಮ್ಮ ಉತ್ತರದಿಂದ ನಾವು ತೃಪ್ತಿಯಾದರೆ ನಾವು ಜನರಿಗೆ ಉತ್ತರ ಹೇಳುವುದು ಹೇಗೆ. ಮಾನ್ಯ ಕಂದಾಯ ಸಚಿವರು ನಮ್ಮ ಜಿಲ್ಲೆಗೆ ಬರಲಿ, ನಾನು ಕರೆದುಕೊಂಡು ಹೋಗುತ್ತೇನೆ. ಯಾವ ರೀತಿ ಜನರಿಗೆ ಉತ್ತರ ಹೇಳಬೇಕೋ ಅವರೇ ಹೇಳಲಿ. ಈಗ ತಕ್ಷಣ ಇಷ್ಟು ಹಣ ಬಿಡುಗಡೆ ಮಾಡುತ್ತೇವೆಂದು ಸ್ಪಷ್ಟವಾದ ನಿಲುವನ್ನು ಮಾನ್ಯ ಮಂತ್ರಿಗಳು ತೆಗೆದುಕೊಳ್ಳದೇ ಹೋದರೆ ನಮಗೆ ಬಹಳ ಕಷ್ಟವಾಗುತ್ತದೆ. ಇದು ಬಹಳ ಗಂಭೀರ ಸಮಸ್ಯೆ ಇದೆ. ಇಡೀ ಸದನ ಇದರ ಬಗ್ಗೆ ಗಮನಹರಿಸಬೇಕೆಂದು ಎಲ್ಲ ಸದಸ್ಯರಲ್ಲೂ ಕಳಕಳಿಯಿಂದ ಮನವಿ ಮಾಡುತ್ತೇನೆ. ಸರ್ಕಾರದ ಗಮನವನ್ನು ಯಾವರೀತಿ ನಾನು ಸೆಳೆಯಬೇಕೆಂದು

ನನಗೆ ಅರ್ಥವಾಗುತ್ತಿಲ್ಲ. ಬರೀ ತಮ್ಮ ಹೇಳಿಕೆಯಿಂದಲೇ ನಾವು ತೃಪ್ತರಾದರೆ, ನಾವು ಹಳ್ಳಿಗಳಿಗೆ ಹೋಗಿ ಕೆಲಸ ಮಾಡುವುದಾದರೂ ಹೇಗೆ. ಈಗ ಕುಡಿಯುವ ನೀರಿನ ಅವಶ್ಯಕತೆ ಇದೆ, ಈಗ ಅವರಿಗೆ ಯಾವರೀತಿ ನೀರನ್ನು ಒದಗಿಸಬೇಕು ಎನ್ನುವುದರ ಬಗ್ಗೆ ದಯವಿಟ್ಟು ತಾವೇ ಹೇಳಿ. ಈಗ ಟಾಸ್ಕ್‌ಫೋರ್ಸ್ ಎಂದು ಮಾಡಿಬಿಟ್ಟು, ಟಾಸ್ಕ್‌ಫೋರ್ಸ್ ಏನಾಯಿತು. ಟಾಸ್ಕ್ ಫೋರ್ಸ್‌ನಲ್ಲಿ ಒಂದು ಪೈಸೆ ಹಣ ಇಲ್ಲ. ಈ ವಿಚಾರದಲ್ಲಿ ಜಿಲ್ಲಾಪರಿಷತ್‌ನವರನ್ನು ಕೇಳಿದರೆ, ಬಡ್ಜೆಟ್ ಅಪ್ರೂವ್ ಆಗಿಲ್ಲ, ನಾವು ಕೊರೆಯುವುದಿಲ್ಲ ಎಂದು ಅವರು ಹೇಳುತ್ತಿದ್ದಾರೆ. ಆದ್ದರಿಂದ, ನಮಗೆ ಮಾನ್ಯ ಮಂತ್ರಿಗಳು ಇಷ್ಟು ಹಣ ಬಿಡುಗಡೆ ಮಾಡುತ್ತೇವೆಂದು ಖಚಿತವಾಗಿ ಹೇಳಲೇಬೇಕಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಹಣ ರಿಲೀಸ್ ಆದ ಬಗ್ಗೆ ಗೌರ್ನಮೆಂಟ್ ಆರ್ಡರನ್ನು ನಾನು ಮಾನ್ಯ ಸದಸ್ಯರಿಗೆ ಕೊಡುತ್ತೇನೆ. ಹಣ ರಿಲೀಸ್ ಆದ ತಿಂಗಳುವಾರು ವಿವರವನ್ನೂ ನಾನು ಹೇಳಿದೆ. ಇನ್ನೂ ಕಡಿಮೆ ಬಿದ್ದರೂ ಕೂಡ ಸರ್ಕಾರ ಕೊಡಲಿಕ್ಕೆ ಸಿದ್ಧ ಇದೆ. ಡೆಪ್ಯುಟಿ ಕಮೀಷನರ್‌ರವರು ಕೇಳಲಿ ನಾಳೆಯೇ ಹಣವನ್ನು ಬಿಡುಗಡೆ ಮಾಡುತ್ತೇನೆ.

ಶ್ರೀ ಆರ್. ನಾರಾಯಣ : ಟಾಸ್ಕ್ ಫೋರ್ಸ್‌ನಿಂದ ಹಣಬೇಕು ಎಂದು ರೆಕಮೆಂಡೇಷನ್ ಬಂದಿದೆಯಲ್ಲ, ಹಣದ ಅವಶ್ಯಕತೆ ಇದೆಯಲ್ಲ!

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇಲ್ಲ ಎಂದು ಯಾರು ಹೇಳಿದರು, ನಾನು ಹೇಳಿದೆನೆ?

ಶ್ರೀ ಆರ್. ನಾರಾಯಣ : ಮತ್ತೆ ಎಂದು ಹಣ ಬಿಡುಗಡೆಮಾಡುತ್ತೀರೆಂದು ಖಚಿತವಾಗಿ ನಮಗೆ ಹೇಳಿ.

SRI. M. MALLIKARJUNA KHARGE: I am very sorry.

ಶ್ರೀ ಆರ್. ನಾರಾಯಣ : ನಾವು ಶಾಸಕರು ತೊಂದರೆ ಇದೆ ಎಂದು ಹೇಳುತ್ತಿಲ್ಲವೆ. ತಾಲ್ಲೂಕು ಮಟ್ಟದ ಟಾಸ್ಕ್ ಫೋರ್ಸ್ ಸಮಿತಿಯಿಂದ ರೆಕಮಮೆಂಡೇಷನ್ ಬಂದಿಲ್ಲವೆ?

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ : ಜಿಲ್ಲಾಧಿಕಾರಿಗಳನ್ನು ಕೇಳಿದರೆ ಹಣ ಬಿಡುಗಡೆಯಾಗಿಲ್ಲವೆಂದು ಹೇಳುತ್ತಿದ್ದಾರೆ. ಅಲ್ಲದೆ, ಹೋದ ಬೇಸಿಗೆಯಲ್ಲಿ ಆಗಿರುವುದಕ್ಕೆ ಮೇ ತಿಂಗಳಿನಲ್ಲಿ ಪೇಮೆಂಟ್ ಆಗಿದೆ. ತುಮಕೂರು ಜಿಲ್ಲೆಯಲ್ಲಿ ಬಹಳ ತಾಪತ್ರಯ ಇದೆ.

(ಗೊಂದಲ)

+ ಶ್ರೀ ಟಿ.ಬಿ. ಜಯಚಂದ್ರ : ಅಧ್ಯಕ್ಷರೆ, ನಾನು ತಮ್ಮ ಗಮನಕ್ಕೆ ತರುವುದೇನೆಂದರೆ, ಇವೊತ್ತು ಟಾಸ್ಕ್ ಫೋರ್ಸ್‌ನವರು ಉಪಯೋಗಿಸತಕ್ಕ ರಿಗ್ ಕೇವಲ 200 ರಿಂದ 300 ಅಡಿಯವರೆಗೆ ಮಾತ್ರ ಹೋಗುತ್ತದೆ. ನಮ್ಮ ಜಿಲ್ಲೆಯ, ನಮ್ಮ ಭಾಗದಲ್ಲಿ, ಸುಮಾರು 350 ರಿಂದ 400 ಅಡಿಯವರೆಗೆ ಆಳ ಹೋದರೂ ಕೂಡ ನೀರು ಸಿಕ್ಕದೇ ಇರತಕ್ಕಂಥ ಪರಿಸ್ಥಿತಿ ಇದೆ. ಅದಕ್ಕೋಸ್ಕರ ನೀವು ಸಾಕಷ್ಟು ಹಣ ಕೊಟ್ಟಿದ್ದೀರಿ, ಕೊಟ್ಟಿಲ್ಲವೆಂದು ಹೇಳುವುದಿಲ್ಲ. ಆದರೆ ಇನ್ನೂ ಹೆಚ್ಚು ಹಣವನ್ನು ಕೊಟ್ಟು 350 ರಿಂದ 400 ಅಡಿ ಆಳ ಕೊರೆಸುವಂಥ ವ್ಯವಸ್ಥೆ ಮಾಡಿದರೆ ಮಾತ್ರ ನೀರು ಸಿಕ್ಕುತ್ತದೆ. ಈಗ ಟಾಸ್ಕ್ ಫೋರ್ಸ್‌ನಲ್ಲಿ ಏನಾಗಿದೆ ಅಂದರೆ, ನೀವು ಬೋರ್‌ರೆಲ್ ಕೊರೆಸುತ್ತೀರಿ, ಅಷ್ಟೇ, ಅಲ್ಲಿ ಬರೀ ಆಯಿಲ್ ಪಂಪ್ ಹಾಕುತ್ತೀರಿ,

ನೀರು ಬರುವುದಿಲ್ಲ. ಅದು 120 ಅಡಿಯಿಂದ 150 ಅಡಿಯವರೆಗೆ ಇದ್ದರೆ ಮಾತ್ರ ಬರುತ್ತದೆ, ಇಲ್ಲದೇ ಇದ್ದರೆ ಬರುವುದಿಲ್ಲ. ಅದಕ್ಕೋಸ್ಕರ, ನೀವು 350 ಅಡಿಯಿಂದ 400 ಅಡಿವರೆಗೆ ಎಲ್ಲಿ ಆಳ ಹೋಗಿದೆ ಅಂಥ ಕಡೆ ಪಂಪನ್ನು ಅಳವಡಿಸತಕ್ಕಂಥ ವ್ಯವಸ್ಥೆ ಮಾಡಿ, ಟಾಸ್ಕ್‌ಫೋರ್ಸ್‌ನವರಿಗೆ ಅಧಿಕಾರವನ್ನು ಕೊಟ್ಟು, ಹಣವನ್ನು ಕೊಟ್ಟರೆ ಮಾತ್ರ ಇದು ಸಾಧ್ಯವಾಗುತ್ತದೆ. ಇವೊತ್ತು ನೀರಿಗೋಸ್ಕರ 6 ಸಾವಿರ, 8 ಸಾವಿರ ಜನಸಂಖ್ಯೆ ಇರತಕ್ಕ ಹಳ್ಳಿಯವರು, ಊರು ಬಿಡತಕ್ಕಂಥ ಪರಿಸ್ಥಿತಿ ಬಂದಿದೆ. ಆದ್ದರಿಂದ, ದಯಮಾಡಿ ಟಾಸ್ಕ್‌ಫೋರ್ಸ್‌ನವರಿಗೆ ಅವಕಾಷ ಮಾಡಿಕೊಡಬೇಕೆಂದು ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಈ ನಮ್ಮ ನ್ಯಾಚುರಲ್ ಕಲಾಮಿಟಿ ಫಂಡ್‌ನಲ್ಲಿ ನಾವೇನು ಹಣ ಬಿಡುಗಡೆ ಮಾಡುತ್ತೇವೆ, ಯಾವ ಒಂದು ಪದ್ಧತಿಯಿಂದ ಮಾಡುತ್ತೇವೆ, ಅದಕ್ಕೆ ಯಾವ ಒಂದು ನಾರಮ್ಸ್ ಅನ್ನು ಗೌರ್ನಮೆಂಟ್ ಆಫ್ ಇಂಡಿಯಾದವರು ಹಾಕಿದ್ದಾರೆ. ಎನ್ನುವುದು ಬಹುಶಃ ಮಾನ್ಯ ಸದಸ್ಯರಿಗೆ ಗೊತ್ತಿರಬಹುದು. ಆ ನಾರಮ್ಸ್‌ಪ್ರಕಾರವೇ, ನಾವು ಹಣವನ್ನು ಬಿಡುಗಡೆ ಮಾಡಬೇಕಾಗುತ್ತದೆ. ನಿಮಗೆ ಗೊತ್ತಿದ್ದ ಹಾಗೆ, ರೆಗ್ಯುಲರ್ ಬಡ್ಜೆಟ್‌ನಲ್ಲಿ ಡ್ರಿಂಕಿಂಗ್ ವಾಟರ್ ಪ್ರಾಬ್ಲಮ್, ಅದು ಪೈಪ್ ವಾಟರ್ ಸಪ್ಲೈ ಸ್ಕೀಮ್ ಇರಬಹುದು..ಮಿನಿವಾಟರ್ ಸಪ್ಲೈ ಸ್ಕೀಮ್ ಇರಬಹುದು, ಅದಕ್ಕೆ ಒಂದು ಯೋಜನೆಯನ್ನು ರೂಪಿಸಿಕೊಂಡು ಇಲಾಖೆಯವರು ಡೆವಲಪ್‌ಮೆಂಟಲ್ ವರ್ಕ್ಸ್ ಮಾಡುತ್ತಾರೆ. ಆದರೆ ನ್ಯಾಚ್ಯುರಲ್ ಕಲಾಮಿಟೀಸ್ ಅಂದರೆ ತಕ್ಷಣ ಎಲ್ಲಿಯೋ ಒಂದು ಊರಿನಲ್ಲಿ ನೀರಿನ ಕೊರತೆ ಇದ್ದರೆ, ಟ್ರಾನ್ಸ್‌ಪೋರ್ಟ್ ಮಾಡತಕ್ಕಂಥಾದ್ದು ಇಮಿಡಿಯಟಿಲಿ ಒಂದು ಬೋರ್‌ವೆಲ್ ಹಾಕತಕ್ಕಂಥಾದ್ದು, ಈ ಒಂದು ನಮಗೆ ಏನು ಗೈಡ್‌ಲೈನ್ಸ್ ಇದೆ, ಈ ಗೈಡ್‌ಲೈನ್ಸ್ ನ ಪ್ರಕಾರ ಇವೊತ್ತು ನಾವುಹಣ ಬಿಡುಗಡೆ ಮಾಡುತ್ತೇವೆ. ಅದರ ಪ್ರಕಾರ ನಾನು ಈಗಾಗಲೇ ಹೇಳಿದ್ದೇನೆ. ನಮ್ಮ ಇಲಾಖೆಯಿಂದ 28 ಲಕ್ಷ ರೂಪಾಯಿ ಬಿಡುಗಡೆ ಮಾಡಿದ್ದೇವೆ. ಅದೂ ಅಲ್ಲದೆ, ಸೆಂಟ್ರಲ್‌ನಲ್ಲಿ ಮತ್ತು ಸ್ಟೇಟ್ ಸೆಕ್ಟಾರ್‌ನಲ್ಲಿ ಈಗಾಗಲೇ ಬಿಡುಗಡೆ ಮಾಡಿದಂಥ ಹಣ ಸೇರಿಸಿ ಸುಮಾರು ಒಂದು ಕೋಟಿ ರೂಪಾಯಿ ಅವರ ಹತ್ತಿರ ಇದೆ. ಅದನ್ನು ಖರ್ಚು ಮಾಡಿದ್ದಾರೆ ಎನ್ನತಕ್ಕಂಥಾ ಮಾತನ್ನು ಈಗಾಗಲೇ ಹೇಳ್ಳುತ್ತಿದ್ದಾರೆ. ಒಂದು ವೇಳೆ ಖರ್ಚುಮಾಡಿದ್ದರೆ, ನಾನು ನಾಳೆ ಡೆಪ್ಯುಟಿ ಕಮೀಷನರ್‌ರವರನ್ನು ಇಲ್ಲಿಗೆ ಕರೆಸಿ ಅವರಿಗೆ ಎಷ್ಟು ಹಣ ಬೇಕಾಗುತ್ತದೆ. ಮತ್ತು ನಮ್ಮ ನಾರಮ್ಸ್ ಪ್ರಕಾರ ಎಷ್ಟು ಹಣ ನಾವು ಬಿಡುಗಡೆ ಮಾಡಬೇಕು ಅದನ್ನು ತಕ್ಷಣ ನಾನು ಮಾಡಿಕೊಡುತ್ತೇನೆ.

(ಗೊಂದಲ)

ಶ್ರೀ ಜಿ.ಎಸ್. ಶಿವನಂಜಪ್ಪ : ಮಾನ್ಯ ಅಧ್ಯಕ್ಷರೆ, ಕಳೆದ ತಿಂಗಳು 16ನೇ ತಾರೀಖು ...

ಛೇರ್ಮನ್: ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಹನುಮೇಗೌಡರೆ, ನೀವು ಗಮನ ಸೆಳೆಯಿರಿ.

ಶ್ರೀ ಜಿ.ಎಸ್. ಶಿವನಂಜಪ್ಪ : ವರಿಗೆ ಸಹಾಯವಾಗುವಂಥ ರೀತಿಯಲ್ಲಿ ನಾನು ಹೇಳುತ್ತಿದ್ದೇನೆ. ಕಳೆದ ತಿಂಗಳು 16ನೇ ತಾರೀಖು ನಮ್ಮ ಜಿಲ್ಲಾ ಪರಿಷತ್ತಿನಲ್ಲಿ ಒಂದು ಮೀಟಿಂಗ್ ಆಯಿತು. ನಮ್ಮ ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಬಹಳ ಬೃಹದಾಕಾರವಾಗಿ ಬೆಳೆದಿದೆ. ಕೊನೆಯ ಪಕ್ಷ 100 ಬೋರ್‌ವೆಲ್‌ಗಳಂತೆ ಒಂದೊಂದು ತಾಲ್ಲೂಕಿನಲ್ಲಿ ಬೇಕಾಗುತ್ತದೆಂದು ನಾವು ರೆಸಲ್ಯೂಷನ್ ಮಾಡಿ ಸರ್ಕಾರಕ್ಕೆ

ಕಳುಹಿಸಿಕೊಟ್ಟಿದ್ದೇವೆ. ಇವತ್ತು ನಾವು ಯಾರೂ ಕೂಡ ನಮ್ಮ ನಮ್ಮ ಕ್ಷೇತ್ರಗಳಿಗೆ ಹೋಗುವಂತಿಲ್ಲ. ಇದರ ಬಗ್ಗೆ ಸರ್ಕಾರ ವಿಶೇಷವಾಗಿ ಕಾಳಜಿ ವಹಿಸಿ, ಮಾನ್ಯ ಮಂತ್ರಿಗಳು ಬಹುಶಃ ನಮ್ಮ ಗೋಳನ್ನು ನೀಗುತ್ತಾರೆಂದು ನಾನು ಭಾವಿಸಿದ್ದೇನೆ.

(2) ಹಾಸನದಲ್ಲಿ ಸೀಮೆ ಎಣ್ಣೆ ಅಭಾವದಿಂದ ಜನರಿಗೆ ತೊಂದರೆಯಾಗಿರುವ ಬಗ್ಗೆ.

ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ) : ಮಾನ್ಯ ಅಧ್ಯಕ್ಷರೆ, ಹಾಸನದಲ್ಲಿ ಸೀಮೆಎಣ್ಣೆಗೆ ತುಂಬಾ ಅಭಾವವಿದ್ದು ಜನರಿಗೆ ತೊಂದರೆಯಾಗಿರುವ ವಿಚಾರದಲ್ಲಿ ಮಾನ್ಯ ಆಹಾರ ಸಚಿವರ ಗಮನವನ್ನು ಸೆಳೆಯುತ್ತಿದ್ದೇನೆ.

ಛೇರ್ಮನ್ : ಹನುಮೇಗೌಡರೆ, ನಿಮ್ಮ ಗಮನ ಸೆಳೆಯುವ ಸೂಚನೆಗೆ ಮಾನ್ಯ ಮಂತ್ರಿಗಳಿಂದ ನಾಳೆ ಸೋಮವಾರ ಉತ್ತರವನ್ನು ಕೊಡಿಸುತ್ತೇನೆ. ಅದುವರೆಗೂ ಇದನ್ನು ತಡೆ ಹಿಡಿದಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ನಾನು ತಮಗೆ ಈಗಾಗಲೇ ಒಂದು ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಿದ್ದೇನೆ. ಈ ಬೆಂಗಳೂರು ನಗರದಲ್ಲಿ ತಿರುವಳ್ಳವರ್ ಕವಿಯ ಪ್ರತಿಮೆಯನ್ನು ಸ್ಥಾಪಿಸುವುದಕ್ಕೆ ಹೊರಟಿದ್ದಾರೆ. ನಗರಸಭೆಯವರು ಕಾನೂನು ಪ್ರಕಾರ ವ್ಯವಸ್ಥಿತವಾಗಿ ಕೆಲಸ ಮಾಡುತ್ತಿಲ್ಲ. ತಮಿಳ್ನಾಡಿನಲ್ಲಿ ನಮ್ಮ ಕರ್ನಾಟಕದ ಕವಿಗಳ ಪ್ರತಿಮೆ ಎಲ್ಲೂ ಇಲ್ಲ. ಆದರೆ ನಮ್ಮ ಕರ್ನಾಟಕದಲ್ಲಿ ತಮಿಳ್ನಾಡಿನ ಕವಿಗಳ ಪ್ರತಿಮೆಗಳನ್ನು ಹಾಕುವುದಕ್ಕೆ ಸರ್ಕಾರ ನಿರ್ಧಾರವನ್ನು ಕೈಗೊಂಡಿದೆ. ಆ ಸದನದಲ್ಲಿ ಈ ವಿಚಾರ ಚರ್ಚೆಯಾಗಿದೆ. ಇವತ್ತು ಅಲ್ಲಿ ಇದರ ಬಗ್ಗೆ ಉತ್ತರವನ್ನು ಹೇಳುತ್ತೇನೆಂದು ಹೇಳಿದ್ದಾರೆ. ಇದು ಬಹಳ ಗಂಭೀರವಾದ ಪ್ರಶ್ನೆ. ಸರ್ಕಾರ ಇದರ ಬಗ್ಗೆ ಒಂದು ಹೇಳಿಕೆಯನ್ನು ಕೊಡಬೇಕು. ಸರ್ಕಾರದಿಂದ ತಾವು ಒಂದು ಹೇಳಿಕೆಯನ್ನು ಕೊಡಿಸಬೇಕು..

ಛೇರ್ಮನ್ : ಇದು ಆದಮೇಲೆ..

ಶ್ರೀ ವಾಟಾಳ್ ನಾಗರಾಜ್ : ತಾವು ಸರ್ಕಾರದಿಂದ ಒಂದು ಹೇಳಿಕೆಯನ್ನು ಕೊಡಿಸಬೇಕು. ಇದರ ಬಗ್ಗೆ ಸರ್ಕಾರದ ನೀತಿ ಏನು? ಈ ಪ್ರತಿಮೆಗಳನ್ನು ಹಾಕಬೇಕಾದರೆ ಸರ್ಕಾರದ ನೀತಿ ಏನು ಎಂಬುದನ್ನು ಹೇಳಬೇಕು...

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಇದರ ಬಗ್ಗೆ ಸರ್ಕಾರದ ನೀತಿ ಏನು? ಯಾರೋ ಒಬ್ಬ ಕಾರ್ಪೊರೇಷನ್ ಅಧಿಕಾರಿ ಈ ರೀತಿ ಮಾಡಿರುವುದಕ್ಕೆ ಏನು ಕಾರಣ ಏನು ಉದ್ದೇಶವಿದೆ? ಸರ್ಕಾರ ಇದರ ಬಗ್ಗೆ ಹೇಳಬೇಕು..

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೆ, ಇದು ಸರಿಯಲ್ಲ. ಈ ಬಗ್ಗೆ ನಮಗೆ ಸ್ಪಷ್ಟವಾಗಿ ಹೇಳಬೇಕು.

(ಗೊಂದಲ)

ಛೇರ್ಮನ್: ನಿಯಮ 334ರ ಕೆಳಗೆ ಮಾನ್ಯ ಸದಸ್ಯರಾದ ದಯಾನಂದರಾವ್‌ರವರು ಹೇಳಬೇಕು. ನಾನು ಅವರನ್ನು ಕರೆದಿದ್ದೇನೆ.

(ಗೊಂದಲ)

ಛೇರ್ಮನ್ : ದಯಾನಂದರಾವ್‌ರವರೇ ನೀವು...